ವಿಶಾಖ ಎನ್.

# ಮೃಣಾಲ್‌ಗೆ ಸಿಕ್ಕ ಆಪ್ತ ಸ್ನೇಹಿತೆ

ಮೃಣಾಲ್ ಠಾಕೂರ್ ಈಗ ಮುಂಬೈನಲ್ಲಿ ಒಂದು ಕಾಲು, ಹೈದರಾಬಾದ್‌ನಲ್ಲಿ ಇನ್ನೊಂದು ಕಾಲು ಇಟ್ಟಿರುವ ನಟಿ. ಅವರು ಈ ನಗರಗಳ ನಡುವೆ ವಿಮಾನದಲ್ಲಿ ಸಂಚರಿಸುವುದು ಈಗ ರೂಢಿಯಾಗಿದೆ. ಹೀಗೇ ಒಮ್ಮೆ ವಿಮಾನದಲ್ಲಿ ಮುಂಬೈನಿಂದ ಹೈದರಾಬಾದ್‌ಗೆ ಸಾಗುವಾಗ ಅವರಿಗೆ ತಾರಾನಟಿಯೊಬ್ಬರು ಆಪ್ತರಾದರು. ಅವರೇ ತಮನ್ನಾ ಭಾಟಿಯಾ. ಆ ಭೇಟಿಯಿಂದ ಹುಟ್ಟಿದ ಸ್ನೇಹ ಈಗ ಗಾಢವಾಗಿದೆ.

‘ಕಾಲೇಜು ದಿನಗಳಲ್ಲಿ ಸ್ನೇಹಿತರಿದ್ದರೇ ವಿನಾ ಸ್ನೇಹಿತೆಯರು ನನಗೆ ಇರಲೇ ಇಲ್ಲ. ಐದು ಹುಡುಗರು, ಒಂದು ಹುಡುಗಿ ನಮ್ಮ ಗುಂಪಿನಲ್ಲಿ ಇರುತ್ತಿದ್ದುದು ಮಾಮೂಲಾಗಿತ್ತು. ಅದೇಕೋ ಸ್ನೇಹಿತೆಯ ಕೊರತೆ ಆಗ ಕಾಡಲೇ ಇಲ್ಲ. ತಮನ್ನಾ ಜೊತೆ ಸ್ನೇಹ ಗಟ್ಟಿಗೊಂಡ ಮೇಲೆ ಆ ಸಂಬಂಧ  ಅರಿವಾಗುತ್ತಿದೆ’ ಎಂದು ಮೃಣಾಲ್ ಹೇಳಿದ್ದಾರೆ.

ತಮನ್ನಾ ಆತ್ಮಾಭಿಮಾನದ, ತುಂಬು ಉತ್ಸಾಹ ಇರುವ ನಟಿ. ಅವರ ಎದುರು ಕುಳಿತು ಏನು ಬೇಕಾದರೂ ಬಡಬಡಿಸಬಹುದು ಎನ್ನುವುದು ಮೃಣಾಲ್ ಅನುಭವ ನುಡಿ. ಎಲ್ಲರ ಎದುರಲ್ಲೂ ಹಾಗೆ ಮುಕ್ತವಾಗಿ ಮಾತನಾಡುವುದು ಸಾಧ್ಯವಿಲ್ಲ ಎನ್ನುವುದು ಗೊತ್ತಿರುವ ಮೃಣಾಲ್, ಕಾಲಾಂತರದಲ್ಲಿ ತಮನ್ನಾ ಅವರಿಗೆ ಅತ್ಯಾಪ್ತರಾದರು.



ತಮನ್ನಾ ಭಾಟಿಯಾ



‘ತಮನ್ನಾ ಬಳಿ ಎಲ್ಲ ಸಮಸ್ಯೆಗಳಿಗೂ ಪರಿಹಾರ ಇರುತ್ತದೆ. ಫಿಲ್ಟರ್ ಇಲ್ಲದೆ ನಮ್ಮ ಮನಸ್ಸಿನಲ್ಲಿ ಇರುವ ಎಲ್ಲವನ್ನೂ ಅವರ ಎದುರು ಸಲೀಸಾಗಿ ಹೇಳಿಕೊಳ್ಳಬಹುದು. ಆಮೇಲೆ ನಿರಾಳವಾದಾಗ ಮನಸ್ಸಿನ ಭಾರವೆಲ್ಲ ಇಳಿದಂತಾಗುತ್ತದೆ’ ಎನ್ನುತ್ತಾರೆ ಮೃಣಾಲ್.

ಈ ನಟಿ ಅಭಿನಯಿಸಿರುವ ‘ಡಕಾಯಿತ್: ಏಕ್ ಪ್ರೇಮ್ ಕಥಾ’ ಹಿಂದಿ ಹಾಗೂ ತೆಲುಗು ಭಾಷೆಗಳಲ್ಲಿ ಏಪ್ರಿಲ್ 10ರಂದು ತೆರೆಕಂಡಿದೆ. ಡಕಾಯಿತಿಯ ಕಥಾನಕವುಳ್ಳ ಈ ಸಿನಿಮಾದ ಟ್ರೈಲರ್‌ಗೆ ನೋಡುಗರಿಂದ ಮೆಚ್ಚುಗೆ ವ್ಯಕ್ತವಾಗಿತ್ತು. ಶನಿಲ್ ದೇವ್ ನಿರ್ದೇಶನದ ಈ ಚಿತ್ರದಲ್ಲಿ ಅದಿವಿ ಶೇಷ್ ನಾಯಕರಾಗಿದ್ದಾರೆ. ‘ಗೂಢಚಾರಿ’, ‘ನಿಶ್ಯಬ್ದಂ’ ತೆಲುಗು ಸಿನಿಮಾಗಳಲ್ಲಿ ಸಿನಿಮಾಟೊಗ್ರಫರ್ ಆಗಿ ಕೆಲಸ ಮಾಡಿರುವ ಶನಿಲ್ ಅವರಿಗೆ ನಿರ್ದೇಶನದಲ್ಲಿ ಛಾಪು ಮೂಡಿಸುವ ಮಹತ್ವಾಕಾಂಕ್ಷೆ ಇದೆ. ಸಂಕಲನದ ಕೆಲಸವೂ ಗೊತ್ತಿರುವ ಇವರು ಬೆಳೆದದ್ದು ಕ್ಯಾಲಿಫೋರ್ನಿಯಾ ದೇಶದಲ್ಲಿ. ಮೃಣಾಲ್ ತಮ್ಮ ಹೊಸ ಸಿನಿಮಾ ಪ್ರಚಾರದ ಭರಾಟೆಯ ನಡುವೆಯೂ ಸ್ನೇಹ ಅತಿ ಮಧುರ ಎನ್ನುವುದನ್ನೇ ಪದೇ ಪದೇ ಹೇಳುತ್ತಿದ್ದಾರೆ. ■

---

## 1000 ಕೋಟಿ ಗಳಿಕೆಯ 4ಚಿತ್ರಗಳಲ್ಲಿ ಒಬ್ಬರದ್ದೇ ಅಭಿನಯ

ದಶಕಗಳ ಹಿಂದೆ ‘ಗಜಿನಿ’ ಹಿಂದಿ ಸಿನಿಮಾ ₹100 ಕೋಟಿ ಗಳಿಸಿದಾಗ ಅದೊಂದು ದೊಡ್ಡ ಮೈಲುಗಲ್ಲಾಗಿತ್ತು. ಕೋವಿಡ್ ಕಾರ್ಮೋಡ ಕವಿದಾಗ ಚಿತ್ರರಂಗದ ಭವಿಷ್ಯ ಏನು ಎಂಬ ಪ್ರಶ್ನೆ ಉದ್ಭವಿಸಿತ್ತು. ಆಮೇಲೆ ‘ಕೆಜಿಎಫ್ 2’ ಸಾವಿರ ಕೋಟಿ ಗಳಿಕೆಯ ಕ್ಲಬ್ ಸೇರಿತು. ಆಮೇಲೆ ‘ಜವಾನ್’ ಆ ಮೈಲುಗಲ್ಲನ್ನು ಮುಟ್ಟಿತು. ಇದೀಗ ‘ಧುರಂಧರ್’ ಹಿಂದಿ ಸಿನಿಮಾದ ಎರಡೂ ಭಾಗಗಳು ತಲಾ ಸಾವಿರ ಕೋಟಿಗೂ ಹೆಚ್ಚು ಹಣ ಗಳಿಸಿವೆ. ಇವುಗಳಿಗೂ ಮೊದಲು ‘ಬಾಹುಬಲಿ 2’ ಸಿನಿಮಾ ಗಳಿಕೆಯಲ್ಲಿ ಈ ₹1000 ಕೋಟಿ ಕ್ಲಬ್ ಎನ್ನುವುದನ್ನು ಸೃಷ್ಟಿಸಿತ್ತು.

ಇಡೀ ದೇಶವನ್ನು ಮಾರುಕಟ್ಟೆಯಾಗಿಸಿ ಸಿನಿಮಾ ವಹಿವಾಟನ್ನು ಬೆಳೆಸುವ ಜಾಯಮಾನವಿದು. ಅಮೀರ್ ಖಾನ್ ಮೊದಲಿನಿಂದಲೂ ಗಳಿಕೆಯ ಲೆಕ್ಕಾಚಾರದಲ್ಲಿ ಮುಂದಿದ್ದರು. ‘ದಂಗಲ್’ ಸಿನಿಮಾದಲ್ಲಿ ಅವರು ತಮ್ಮದೇ ಗಳಿಕೆಯ ದಾಖಲೆಯನ್ನು ಮುರಿದು, ಅದನ್ನು ದೊಡ್ಡಮಟ್ಟಕ್ಕೆ ಕೊಂಡೊಯ್ದರು. ‘ಸೀಕ್ರೆಟ್ ಸೂಪರ್‌ಸ್ಟಾರ್’ ತರಹದ ಕಡಿಮೆ ಬಜೆಟ್‌ನ ಸಿನಿಮಾ ನಿರ್ಮಿಸಿಯೂ ಅವರು ಲಾಭ ಮಾಡುವುದು ಹೇಗೆ ಎಂದು ತೋರಿಸಿಕೊಟ್ಟರು. ‘ಸಿತಾರೆ ಜಮೀನ್ ಪರ್’ ಸಿನಿಮಾ ಬಂದಾಗ ಅವರು ಯಾವುದೇ ಒಟಿಟಿಗೆ ಸಿನಿಮಾ ಪ್ರದರ್ಶನದ ಹಕ್ಕನ್ನು ಮಾರದೆ, ತಮ್ಮದೇ ಯೂಟ್ಯೂಬ್ ಚಾನಲ್‌ನಲ್ಲಿ ಒಬ್ಬರು ₹100 ಶುಲ್ಕ ಪಾವತಿಸಿ, ನೋಡುವ ಅವಕಾಶ ಕಲ್ಪಿಸಿದರು. ಅದರ ಆದಾಯವು ಚಿತ್ರಮಂದಿರದಲ್ಲಿ ಬಂದಿದ್ದಕ್ಕಿಂತ ಹೆಚ್ಚಾಗಿತ್ತು. ಎಲ್ಲದರ ನಂತರ ಅವರು ಒಟಿಟಿಗೆ ಸಿನಿಮಾ ಹಕ್ಕನ್ನು ಮಾರಾಟ ಮಾಡಿದರು.



ಸಂಜಯ್ ದತ್

ಸಾವಿರ ಕೋಟಿ ರೂಪಾಯಿ ಗಳಿಕೆಯ ಕ್ಲಬ್ ಸೇರಿದ ನಾಲ್ಕು ಸಿನಿಮಾಗಳಲ್ಲಿ ಹಿಂದಿ ಚಿತ್ರರಂಗದ ಒಬ್ಬ ನಟ ಅಭಿನಯಿಸಿದ್ದಾರೆನ್ನುವುದು ಆಸಕ್ತಿಕರ ಸಂಗತಿ. ಅವರು ಶಾರುಕ್ ಖಾನ್, ಯಶ್, ರಣವೀರ್ ಸಿಂಗ್ ಹೀಗೆ ಯಾವುದೇ ಸೂಪರ್ ಸ್ಟಾರ್‌ಗಳೊಟ್ಟಿಗೆ ನಟಿಸಲೂ ಸೈ ಎನ್ನುತ್ತಾರೆ. ಅವರೇ ಸಂಜಯ್ ದತ್. ‘ಕೆಜಿಎಫ್ 2’ ಕನ್ನಡ ಸಿನಿಮಾದಲ್ಲಿ ಅವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು. ‘ಜವಾನ್’ ಹಿಂದಿ ಚಿತ್ರದಲ್ಲೊಂದು ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ‘ಧುರಂಧರ್’ನಲ್ಲಿ ಎಸ್.ಪಿ ಪಾತ್ರದಲ್ಲಿನ ಅವರ ಅಭಿನಯವನ್ನು ಅನೇಕರು ಮೆಚ್ಚಿಕೊಂಡಿದ್ದಾರೆ. ಈ ಎಲ್ಲ ಸಿನಿಮಾಗಳೂ ಸಾವಿರ ಕೋಟಿ ಕ್ಲಬ್ ಸೇರಿದಂಥವು ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು. ■